ಬಡಿವಾರ, ಸೋಗನ್ನು, ದೌರ್ಬಲ್ಯವನ್ನು, ಮಿತಿಯನ್ನು ಅನಾವರಣ ಮಾಡುತ್ತದೆ ಎನ್ನುವುದೂ ಮರುಘಳಿಗೆಯೇ ಹೊಳೆಯುತ್ತದೆ. ಹನ್ನೊಂದು, ಹನ್ನೆರಡರ ವಯಸ್ಸಿನಲ್ಲಿ ಎರಡು ಬಾರಿ ಆತ್ಮಹತ್ಯೆಗೆ ಅಕ್ಕಯ್ ಪ್ರಯತ್ನ ಪಡುತ್ತಾರೆ. ಸ್ಪಷ್ಟತೆಯೆ ಕಷ್ಟವಾದ ಆ ವಯೋಮಾನದಲ್ಲಿಯೂ ಆಕೆಗಿದ್ದ ಸ್ಪಷ್ಟತೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಮನೆಯವರೂ ಸೋಲುತ್ತಾರೆ, ಅಕ್ಕಯ್‌ನನ್ನೂ ಸೋಲಿಸಲು ಹರ ಸಾಹಸ ಮಾಡುತ್ತಾರೆ. ಎರಡನೆಯ ಬಾರಿಯ ಆತ್ಮಹತ್ಯೆಯ ಪ್ರಯತ್ನದಲ್ಲಿ ಉರುಳು ಹಾಕಿಕೊಂಡಮೇಲೇ, ಸಾವಿಗೆ ಅತ್ಯಂತ ಸನಿಹದಲ್ಲಾಗಲೇ ಆಕೆಗೆ, ತಾನು ಬದುಕಲಾಗದೇ ಸಾಯುತ್ತಿರುವುದೋ, ಬದುಕಗೊಡದವರ ಕಾರಣಕ್ಕಾಗಿ ಸಾಯುತ್ತಿರುವುದೋ ಎನ್ನುವ ಮೂಲಪ್ರಶ್ನೆ ಎದುರಾದದ್ದೇ, ತಾನು ಯಾಕೆ ಸಾಯಬೇಕು ಎನ್ನಿಸುತ್ತದೆ. ತಾನು ಹೇಗಿದ್ದೇನೋ ಹಾಗೆ ಬದುಕುವುದು ತನ್ನ ಹಕ್ಕಲ್ಲವೇ ಎನ್ನುವ ಜ್ಞಾನೋದಯವಾದದ್ದೇ ಬದುಕಿನ ದಿಟ್ಟ ಹೋರಾಟಕ್ಕೆ ಅಣಿಯಾಗುತ್ತಾರೆ. ಮನುಷ್ಯ ಮೂಲತಃ ನೀಚ ಎನ್ನುವ ಮಾತಿನ ಪ್ರತಿನಿಧಿಗಳಂತೆ ಲೋಕ ಅವರೊಡನೆ ನಡೆದುಕೊಳ್ಳುತ್ತದೆ. ಇಂಥದ್ದೇ ಸನ್ನಿವೇಶ ಮಂಜಮ್ಮನವರ ಬದುಕಿನಲ್ಲಿಯೂ ಎದುರಾಗುತ್ತದೆ. ಆಕೆಯ ತಂದೆ ಆಕೆಗೆ ಸಿಹಿಊಟದ ಅಡುಗೆ ಮಾಡಿಸಿ, ಇನ್ನು ಆಕೆಗೂ ತಮ್ಮ ಕುಟುಂಬಕ್ಕೂ ಯಾವುದೇ ಸಂಬಂಧವಿಲ್ಲ ಎನ್ನುವುದನ್ನು ನಿಸ್ಸಂಕೋಚವಾಗಿ ಘೋಷಿಸಿ, ಸ್ವತಃ ತಾನೇ ಆಕೆಯನ್ನು ಬಸ್ ಸ್ಟ್ಯಾಂಡಿಗೆ ಬಿಟ್ಟು ಬೆನ್ನು ತಿರುಗಿಸಿ ಹೊರಟುಬಿಡುತ್ತಾನೆ. ಆಕೆಯ ಭವಿಷ್ಯದ ಬಗ್ಗೆ ಕ್ಷಣ ಮಾತ್ರವೂ ಯೋಚನೆ ಮಾಡದೆ. ಇಂಥ ಸನ್ನಿವೇಶಗಳಿಗೇನು ಬರ ಎನ್ನುವ ಪ್ರಶ್ನೆ ಇಲ್ಲಿ ಅಸಂಗತ. ಏಕೆಂದರೆ, ಈ ಸಂದರ್ಭವೇ ವಿಲಕ್ಷಣವಾದುದು. ಆಕೆಯನ್ನು ಸಹಜ ಮಾನುಷಿ ಎಂದು ಒಪ್ಪಲೇ ಸಿದ್ಧರಿಲ್ಲದ ಸಮುದಾಯದಲ್ಲಿ ಏಕಾಂಗಿಯಾಗಿ ಬಿಟ್ಟ ಆಕೆಯ ಪರಿಸ್ಥಿತಿ ಏನಾಗಬಹುದು ಎನ್ನುವುದರ ಅಂದಾಜಿದ್ದರೂ ಅದೇ ಸಮುದಾಯದ ಹೆದರಿಕೆಯಿಂದಲೇ ಮಂಜಮ್ಮನನ್ನು ಹಾಗೆ ಬಿಟ್ಟು ಹೋಗಲು ಅಪ್ಪ ಸಿದ್ಧರಾಗುತ್ತಾರೆ. ಅಸಹಾಯ ಶೂರರಂತೆಯೇ ಮಂಜಮ್ಮನಾಗಲೀ, ಅಕ್ಕಯ್ ಆಗಲೀ ಬದುಕಿನ ನಿರ್ಣಾಯಕ ಘಳಿಗೆಗಳನ್ನು ಎದುರಾಗುತ್ತಾರೆ. ಅಕ್ಕಯ್ ಮನೆಬಿಟ್ಟು ಹೋದದ್ದು ಎಷ್ಟು ಬಾರಿಯೋ ವಾಪಸ್ ಬಂದದು ಎಷ್ಟು ಬಾರಿಯೋ? ಮಂಜಮ್ಮನವರಾದರೂ ಗ್ರಾಮೀಣ ಪ್ರದೇಶಗಳಲ್ಲಿ ಜೋಗತಿ ಪರಂಪರೆಯ ಮೂಲಭೂತ ತಳಹದಿಯಾದರೂ ಇದ್ದದ್ದರಿಂದ ನೂರು ನೋವುಗಳನ್ನು ಅನುಭವಿಸಿದರೂ ಒಬ್ಬರಲ್ಲ ಒಬ್ಬರ ಆಸರೆ ದೊರೆಯುತ್ತಾ ಹೋಗುತ್ತದೆ. ಮತ್ತದೇ ಸ್ವಾರ್ಥದ, ದುರಾಸೆಯ ಅನುಭವಗಳ ಪುನರಾವರ್ತನೆ. ಅಕ್ಕಯ್ ಹಲವು ಎನ್.ಜಿ.ಓ.ಗಳ ಸಂಪರ್ಕಕ್ಕೆ ಬರುತ್ತಾರೆ. ಆದರೆ, ಇಬ್ಬರ ಪ್ರಯತ್ನವೂ, ಗುರಿಯೂ, ಕನಸೂ ಒಂದೇ. 'ಮಾನವ ಸಹಜ' ಬದುಕಿಗಾಗಿನ ತಮ್ಮ ಹಕ್ಕನ್ನು ಉಳಿಸಿಕೊಳ್ಳುವುದು.

ಇದಕ್ಕಾಗಿ ಅವರು ನಡೆಸಿದ ಹೋರಾಟವು ಯಾವ ಸ್ವಾತಂತ್ರ್ಯ ಚಳವಳಿಗೂ ಕಮ್ಮಿಯಾದುದಲ್ಲ. ಇಡ್ಲಿ ಮಾರುವ ಮಂಜಮ್ಮನಾಗಲೀ, ಹಲವು ಕಾರ್ಖಾನೆಗಳಲ್ಲಿ ದುಡಿದು ಮನೆಗೂ ಕೊಡುವ ಅಕ್ಕಯ್ ಆಗಲಿ ಬೆನ್ನತ್ತುವುದು ಆತ್ಮಗೌರವದ ಬದುಕನ್ನು. ಹಲವು ಸಂಬಂಧಗಳಲ್ಲಿ ಬದುಕನ್ನು ಕಟ್ಟಿಕೊಳ್ಳಲು ಹೊರಡುವ ಅಕ್ಕಯ್‌ಗೆ ಉದ್ದಕ್ಕೂ ಎದುರಾಗುವುದು ನಿರಾಶೆಯೇ. ವೇಣು ಎನ್ನುವವರ ಜೊತೆಗಿನ ಸಂಬಂಧವೊಂದು ಸ್ನೇಹದ ಹೂವಾಗಿ ಅರಳಿ ಬದುಕಿನ ಕೊನೆಯವರೆಗೂ ಕೈಹಿಡಿದು ನಡೆಸುತ್ತದೆ. ಮನೆಯೊಂದನ್ನು ಕೊಂಡುಕೊಳ್ಳಲು ಅಕ್ಕಯ್ ಮುಂದಾದಾಗ ಆಕೆಗೆ ಮೂರುಲಕ್ಷದಷ್ಟು ಹಣವನ್ನು ಕೊಟ್ಟು ಸಹಕರಿಸುವುದೂ ಅಲ್ಲದೆ, ಯಾವ ಹಿಂಜರಿಕೆಯೂ ಇಲ್ಲದೆ ಆಕೆಯೊಂದಿಗೆ ಸ್ನೇಹವನ್ನು ಉಳಿಸಿಕೊಳ್ಳುತ್ತಾರೆ. ಮಿಕ್ಕಂತೆ ಮಿಥುನ್ ಎನ್ನುವವರ ಜೊತೆಗಿನ ಕೂಡುಬಾಳುವೆಯಾಗಲೀ, ವಾಸು ಜೊತೆಗಿನ ಮದುವೆಯಾಗಲೀ ಆಕೆಗೆ ಸಿಕ್ಕಿದ್ದು ಕಹಿ ಮತ್ತು ಸೋಲೇ. ಗಂಡಾಳಿಕೆಯ ಎಲ್ಲ ದಬ್ಬಾಳಿಕೆಗಳನ್ನೂ ಈಕೆ ಅನುಭವಿಸುತ್ತಾರೆ. ಆದರೆ, ಏನೆಂಥ